ದಸರೆಯ ಕಾಣಿಕೆ

ಹರಾಮುಕ್ತೆಗಾಗಿ



"ಕನ್ನಡದ ಮಾತೆಯನು ನುತಿಸಿ, ಸೇವಿಸಿ, ಜಗದಿ
ಸೊಗದಿ ಬಾಳ್ವುದೆ ನಮ್ಮ ಗುರಿ–ಧರ್ಮ–ಸತ್ಕರ್ಮ!"

ಜಿ. ಎನ್. ಲಕ್ಷ್ಮಣ ಪೈ

ದಸರೆಯ ಕಾಣಿಕೆ

ಪ್ರಥಮ ಮುದ್ರಣ:
೧೯೩೭

ದ್ವಿತೀಯ ಮುದ್ರಣ:
೧೯೭೧

ಮುದ್ರಕರು / ಪ್ರಕಾಶಕರು:
ವಾಣಿ ಪ್ರಿಂಟರಿ, ಪುತ್ತೂರು.

ಕ್ರಯ: ೦—೭೫ ಪೈಸೆ.

ಮುನ್ನುಡಿ

ಪುತ್ತೂರು ದಸರಾಮಹೋತ್ಸವದ ಸಾಹಿತ್ಯೋತ್ಸವಗಳಲ್ಲಿ ಕವಿತಾ ವಾಚನಕ್ಕೆಂದೇ ರಚಿತವಾದ ಎರಡು ಕವನಗಳನ್ನೊಳಗೊಂಡಿರುವುದರಿಂದ ಈ ಚಿಕ್ಕ ಪುಸ್ತಕವು "ದಸರೆಯ ಕಾಣಿಕೆ"ಯಾಯ್ತು. ಮೊದಲನೇ ಕವನ (ಅಮರಲೋಕ)ವು ೧೯೩೭ರಲ್ಲಿಯೂ, ಎರಡನೇ ಕವನ (ಯದ್ಭಾವಂತದ್ಭವ) ವು ೧೯೩೮ರಲ್ಲಿಯೂ ರಚಿಸಲ್ಪಟ್ಟವು ಓದುಗರು ಈ ಕವನಗಳನ್ನೋದುವಾಗ ಆ ಆ ಕಥೆಯಲ್ಲಿ ಅಡಕವಾಗಿರುವ ತತ್ತ್ವವನ್ನು ಲಕ್ಷಿಸಬೇಕಾಗಿ ಬಿನ್ನಹ.

ಪುತ್ತೂರು,
ಈಶ್ವರ ಸಂ। ಮಾರ್ಗಶಿರ ಬ ೧೨
ತಾ. ೨೯-೧೨-೧೯೩೭

ಜಿ. ಎನ್. ಲಕ್ಷ್ಮಣ ಪೈ

ಅಮರಲೋಕ

ಭೂಮಂಡಲವನೆಂದು ಕತ್ತಲೆಯು ಮುಸುಕುತಿರೆ,
ಗಗನದೊಳು ಮಿಂಚು ಝಗಝಗಿಸುತಿರೆ, ಗುಡುಗು ಘುಡು
ಘುಡಿಸುತಿರೆ, ಮುಗಿಲು ಭೋರ್ಗರೆದು ಜಲಸುರಿಸುತಿರೆ,
ತವಕದಿಂ ನಾ ಮನೆಯ ಸೇರಿ, ಕೋಣೆಗೆ ಸಾರಿ.
ದೀಪವನು ಬೆಳಗಿ, ವಿಶ್ರಾಂತಿಯಾಸನದಲ್ಲಿ
ಕುಳಿತಿದ್ದು. ಕಣ್ಮುಚ್ಚಿ, ಸೃಷ್ಟಿವೈಚಿತ್ರ್ಯವನು
ನೆನೆಯುತ್ತಲಿರಲು ನಡೆದದ್ಭುತವನೇನೆಂಬೆ!

ಗಗನಮಂಡಲದಿಂದ ಥಳಥಳಿಪ ಬೆಳಕೊಂದು
ಬಂದು ತಾನೆನ್ನ ಕಣ್ಗಳನು ಕೋರಯಿಸುತ್ತ
ಲೆನ್ನನ್ನು ಹಿಡಿದೆತ್ತಿ, ಮಿಂಚಿನಾವೇಶದಲಿ
ಮೇಲೆ ನೆಗೆಯುತ, ಸೂರ್ಯಮಂಡಲವನಡಹಾಯ್ದು,
ಒಲು ದೂರ, ದೂರವಿಹ ನಕ್ಷತ್ರಮಂಡಲವ
ನೊಡೆಹಾಯ್ದು. ಹೊಸಲೋಕದೆಡೆಗೊಯ್ದುದತಿ ಜವದಿ!

ರಾರಾಜಿಸುತ್ತಿತ್ತು ದಿವ್ಯಲೋಕವದಹಹ!
ಅದರ ಬೆಡಗನು ಕಂಡು ಮುಗ್ಧನಾದೆನು ನಾನು!

ಸಾಂಪ್ರಚಂದ್ರಿಕೆಯವೊಲು ಶಾಂತತೇಜಸ್ಸೊಂದು
ತಂಬೆಳಕಿನಿಂ ಬೆಳಗುತಿತ್ತಾ ಪ್ರದೇಶವನು;
ಎನ್ನ ಹೃದಯವು ತೋಷ, ಭೀತಿಪ್ರವಾಹಗಳ
ಸಂಗಮಸ್ಥಾನವಾಯಿತು; ಮತ್ತೆ ಧೃತಿಗೊಂಡು
ಮುಂದೆ ಹೋಗಲು ಮಧುರಸಂಗೀತದಾಲಾಪ
ವೊಂದು ಕೇಳಿಸಲದನ್ನಾರಯ್ದು ಮುನ್ನಡೆದೆ
ಅಲ್ಲಿ 'ಮೀರಾಕೆ ಪ್ರಭು ಗಿರಿಧರಾ' ಎಂಬೊಂದು
ಹಿಂದೀ ಸುಗೀತವನ್ನಿಂಪಾಗಿ ಹಾಡುತ್ತ
ರಮಣಿಯೊರ್ವಳು ನಲಿದು ಕೃಷ್ಣನನು ಕೊಂಡಾಡು
ತಿದ್ದುದನು ನೋಡಿ ಧೈರ್ಯವನಾಂತೆ ಮನದೊಳಗೆ

ಆ ಪುಣ್ಯವತಿಯೆಡೆಗೆ ನಡೆತಂದು, ತಲೆವಾಗಿ
"ಹೇ ಜನನಿ! ಭರತಖಂಡದ ವಿಷ್ಣುಭಕ್ತೆಯಾ
ದೇವಿ ಮೀರಾಬಾಯ ಕೃತಿಗಳನು ಹಾಡುತಿಹ
ನೀನಾರು?—ನಾ ಬಂದ ಲೋಕವಾವುದು?—ಇಲ್ಲಿ
ಕನ್ನಡಿಗರಿಲ್ಲವೇ?" ಎಂದು ಕೇಳಿದೆನದಕೆ
ಕನ್ನಡಿಗರಿಹರೆಂದು ಕನ್ನಡಿಪ ತೆರದಿ ತಲೆ
ದೂಗಿ, ಕೈಸನ್ನೆಯಿಂ ಮುಂದೆ ಹೋಗೆಂದವಳು
ನಸುನಗುತ ತಿಳಿಸಲಂತಾ ದಾರಿಯುಲಿ ನಡೆದೆ!

ಇದಿರಾಗಿ ದಿವ್ಯತೇಜಸ್ವಿಯೊರ್ವನು ಬಂದು
"ತಮ್ಮ ಕನ್ನಡಿಗನೇ! ಸ್ವಾಗತವು ನಿನಗೆ"ಂದು

ತಕ್ಕೈಸಿ, ಕೈಹಿಡಿದು ನಡೆದು ಪಕ್ಕದಿ ನೆರೆದ
ಸಭೆಗೆನ್ನನೊಯ್ದು ಪೀಠದ ಮೇಲೆ ಕುಳ್ಳಿರಿಸಿ,
ಸತ್ಕರಿಸಿ, ಮುಗುಳುನಗುತಿಂತು ಮಾತಾಡಿದನು:
"ಸೋದರನೆ! ಭೂಲೋಕದಿಂದ ಹೊಸತಾಗಿಲ್ಲಿ
ಬಂದ ಕಾರಣದಿಂದ ಚಕಿತನಾಗಿಹೆ ನೀನು!
ಮೋದಗೊಳ್ಳುವುದಮರಲೋಕವಿದು— ನಾಕವಿದು!
ಇಲ್ಲಿ ಕೇಳ್ ಕ್ಷುಧೆತೃಷೆಗಳಿಲ್ಲ—ತಾಪತ್ರಯದ
ಸೊಲ್ಲಿಲ್ಲ—ಜನನಮರಣಗಳಿಲ್ಲ—ರುಜೆಯಿಲ್ಲ!
ಈಶಸೇವಾಬುದ್ಧಿಯಿಂದ ಭಾಷಾಸೇವೆ,
ದೇಶಸೇವೆಗಳನ್ನು ಭೂಲೋಕದಲಿ ಗೈದು
ಪೂತರಾಗಿಹ ಭಾಗ್ಯವಂತರೇ ಹೊಂದುವರು
ವಿಬುಧರಾವಾಸವಾದೀ ಪುಣ್ಯಲೋಕವನು!"

"ಇರಲಿರಲಿ. ನಮ್ಮ ಚರಿತೆಯನೋದಿ ಕೇಳಿ ನೀ
ತಿಳಿದಿರುವೆ!—ಆದರೂ ಪ್ರತ್ಯಕ್ಷಪರಿಚಯವು
ನಿನಗಿಲ್ಲದುದರಿಂದ ನಮ್ಮ ಗುರುತಿಸಲಾರೆ!
ವೀರನಾರಣದಾಸ ನಾ **ಕುಮಾರವ್ಯಾಸ**
ನೀತನೇ ಲಾಕ್ಷಣಿಕ **ನೃಪತುಂಗದೇವ**ನಿ
ಯಿವನೆ ಪುಲಿಗೆರೆ ತಿರುಳ್ಗನ್ನಡದ ಕವಿ **ಪಂಪ**
ನವನೆ ಸೌಜನ್ಯಕಂದಾಂಕುರನು ಕವಿ **ಪೊನ್ನ**
ನಿಲ್ಲಿಹನು ಕವಿಚಕ್ರವರ್ತಿ ಬಿರುದಿನ **ರನ್ನ**
ನಲ್ಲಿ ಪಂಪಾಪತಿಯ ಭಕ್ತ **ಹರಿಹರದೇವ**
ನಿತ್ತ ಕವಿಭಾಳಲೋಚನ ಬಿರುದ **ಜನ್ನ**ಕವಿ

ಯತ್ತ ವೈಯಾಕರಣನದೊ **ಕೇಶಿರಾಜಕವಿ**
ಯಿವರೆ ನಡುಗನ್ನಡದಿ ಷಟ್ಪದದ ಝೇಂಕಾರ
ವೆಬ್ಬಿಸಿದ **ರಾಘವಾಂಕಾದಿ ಕವಿಪುಂಗವರು.**
ಅವರೆ ದಾಸರ ಕೂಟದವರು ಕನ್ನಡದಲ್ಲಿ
ಹಾಡುಗಬ್ಬವ ಹರಡಿ ಭಕ್ತಿರಸವೊಸರಿಸಿದ
ಕವಿಪುರಂದರ, ಕನಕದಾಸ ಮುಂತಾದವರು.
ಗದ್ಯಕಾವ್ಯವ ರಚಿಸಿ **ಮುದ್ದಣ**ನೆನಿಸಿಕೊಂಡ
ಇವನೆ ನಂದಳಿಕೆ ಲಕ್ಷ್ಮೀನಾರಣಪ್ಪಯ್ಯ
ನುಳಿದವರು ಸಾಹಿತ್ಯದೇವಿಯಾರಾಧಕರು"

"ಬಾಂಧವನೆ! ಚೆನ್ನ ಕನ್ನಡನಾಡಿನಲಿ ಮೆರೆವ
ನವಯುಗದ ಕವಿಯು ನೀನೆಂದು ನಿನ್ನನ್ನಿಲ್ಲಿ
ಬರುವಂತೆ ನಾ ಗೈದೆ!—ಏರ್ಪಡಿಸಿಹೆವು ನಾವು
'ಭೂಮಂಡಲದ ಕನ್ನಡಿಗರು ಭಾಷಾಸೇವೆ
ಯೊಳು ಆಚರಿಪ ಕುಂದುಕೊರತೆಗಳ ಚರ್ಚಿಸುವ
ಸಾಹಿತ್ಯಗೋಷ್ಠಿ' ಯೊಂದನು!-ಅದಕೆ ನೀ ಸಭಾ
ಪತಿಯಾಗಬೇಕೆಂದು ಬಿನ್ನವಿಪೆನೀ ಸಭೆಯ
ಕಾರ್ಯದರ್ಶಿಯದಾಗಿ"–ಎಂದೆನಲು ಬಲು ಭೀತಿ
ತಾಳಿದೆನು! ನಡುಗಿದೆನು!!–ಕವಿಪುಂಗವರ ಸಂಗ
ವಿದು ನನ್ನ ಮಾನಭಂಗಕ್ಕೆ ಸಂಘಟಿಸಿತೇ—
ಎಂದು ಹಂಬಲಿಸುತ್ತ ಮನದೊಳಗೆ ಮರುಗಿದೆನು

ಹೀಗಿದ್ದರೂ ಧರಣಿಮಂಡಲದ ಗೌರವವ
ಬಿಡಲಾಗದೆಂದು ಧೈರ್ಯವ ತಂದುಕೊಂಡು ನಾ

ಮೆಲ್ಲನಿಯೊಳೆಂದೆ: "ಕವಿವರ! ಕವಿಗಳೀ ಸಭೆಯೊ
ಳಧ್ಯಕ್ಷಪೀಠವೇರುವ ಘನತೆಯೆನಗಿಲ್ಲ!
ಆದರೂ ಬಲು ಮನ್ನಣೆಯಲಿ ನೀನರ್ಪಿಸುವ
ಗೌರವವನೊಲ್ಲೆನೆನ್ನುವ ಸಾಹಸವೆನಗಿಲ್ಲ!
ನಿನ್ನ ಸರಳತೆ, ನಿರಭಿಮಾನಗಳಿಗೀ ನಡತೆ
ಚೆನ್ನು!" ಎನೆ, *ನಾರಣಪ್ಪನು ಹಸ್ತಲಾಘವವ
ನಿತ್ತು ನಾನಗ್ರಾಸನವ ವಹಿಸಬೇಕೆಂದು
ಬಹಿರಂಗದಲಿ ಸೂಚನೆಯನು ತರಲೊಡನೆ ಕವಿ
ರನ್ನನನುಮೋದಿಸಲು, ಸಭಿಕರೆಲ್ಲರು ತಮ್ಮ
ಸಮ್ಮತಿಯ ಸೂಚಿಸಲು ಕರತಾಡನದೊಳಾಗ
ಹಿರಿತನದ ಗದ್ದುಗೆಯನೇರಿದೆನು ಘನತೆಯಲಿ.

ಕವಿಗಳಿಗೆ ರಾಜಮಾರ್ಗವನೊರೆದು ಕವಿರಾಜ
ಕರ್ಣಾಟರಾಜರೊಳು ಕವಿಯಾಗಿ ರಾಜಕವಿ
ನೃಪತುಂಗನಿಂತೆಂದ: "ಕಾವೇರಿಯಿಂದಮಾ
ಗೋದಾವರಿವರಮಿರ್ದತಿ ವಿಶಾಲತೆಯಾಂತ
ಕರ್ಣಾಟದೇಶವದು ಭಿನ್ನಭಿನ್ನತೆಯಾಂತು
ರೂಪವನು ಕಳೆದುಕೊಂಡಿರುವುದಿದು ಸೊಗಸಲ್ಲ!"

ಎನಲೆಂದೆ: "ನೃಪತುಂಗದೇವ! ನಿನ್ನೀ ಮಾತು
ನಿಜ ಮೊನ್ನೆ †ಕಾಂಗ್ರೆಸ್ಸಿನವರು ಸರಕಾರದಾ

*ಕವಿಕುಮಾರವ್ಯಾಸನ ಹೆಸರು
†ಇಡೀ ಹಿಂದುಸ್ಥಾನಕ್ಕೆ ಸಂಬಂಧಪಟ್ಟ ಕಾಂಗ್ರೆಸ್ಸು ಸಂಸ್ಥೆಯವರು

ಅಧಿಕಾರ ಹೊಂದಿಹರು! ದೇಶಹಿತದೃಷ್ಟಿಯಿಂ
ದವರೀಗ ಕರ್ಣಾಟಕೈಕೀಕರಣವನ್ನು
ಸಾಧಿಸಲು ಚಿಂತಿಸುತ್ತಿರುವರಿದು ಶುಭಚಿಹ್ನೆ!''

ಒಡನೆಯೇ ಆದಿಪಂಪನು ನುಡಿದನೀತೆರದಿ.
"ಕನ್ನಡಂ ಕತ್ತುರಿಯದಲ್ತೆ!—ಇಂತಿರ್ದೊಡಂ
ಮನ್ನಿಸುತಾಂಗ್ಲಭಾಷೆಯನೆ ತಿಳಿಗನ್ನಡಕೆ
ಬನ್ನವಂ ತಾವೆ ಗೈದರ್ ಕೆಲರ್—ಕೆಲರಿನ್ನು
ಮನ್ನತಿಯನೆಸಗಿದಪೆವೆಂದು ಸಲ್ಲದ ನಡೆಯ
ನುನ್ನೈಸಿ ಪೊಸತಾಂಗ್ಲ ಭಾವನೆಯಿದೆನ್ನುತ್ತೆ
ಕನ್ನಡದ ಮುನ್ನಡೆಯ ಕಿಡಿಸಿದರ್ ಪೊಡವಿಯವ
ರನ್ನೆಯಮಿದನ್ನೆಯಂ"

ರನ್ನಕವಿಯಿಂತೊರೆದ:
"ಸಾಲೆಯಲಿ ಸಕ್ಕದವ ಕಲಿಯಲೇಬೇಕೆಂಬ
ನಿರ್ಬಂಧವಿಹುದುಚಿತ!—ಕೆಲ ಕನ್ನಡಿಗರಿಂದು
ಸಂಸ್ಕೃತಿಯ ಹೊಂದದಳಿಗಬ್ಬಂಗಳನು ರಚಿಸಿ
ವೃದ್ಧಿಯನು ಕೆಡಿಸುವರು!''

ಜನ್ನಕವಿಯಿಂತೆಂದ:
"ಹಿಂದೆ ಭೂತಳದಿ ಕನ್ನಡದ ಸಸಿ ಬೆಳೆವಂತೆ
ಗೈದ ಕೀರ್ತಿಯು ಜೈನಕವಿಗಳಿಗೆ ಸಲ್ವುದೈ!
ಇಂದು ಜೈನರದೇಕೆ ಹಿಂದುಳಿದಿಹರೊ—ಕಾಣೆ"

ವೈಯಾಕರಣ ಕೇಶಿರಾಜನಿಂತೆಂದ "ನಹ!
ಪಳಗನ್ನಡದ ಶಬ್ದಮಣಿದರ್ಪಣಮನಂದು
ಬರೆದೊಡಂ ನಾಂ ಪೇಳ್ದ ಸೂತ್ರಂಗಳಂ ಮೀರಿ
ಧರಣಿಯೊಳ್ ಮಾನಿಸರ್ ನಡೆವರಿದು ವಿಹಿತಮೇಂ?"

ಕವಿರಾಘವಾಂಕನಿಂತೊರೆದ: "ಬರಿಸಗಳೆಂಟು
ನೂರಾಗಲಾಯ್ತೆಂದು ನುಡಿವ – ಬರೆಯುವ ಭಾಷೆ
ಗಳ ಬೆರಸಿ ಮಿಶ್ರಕನ್ನಡನುಡಿಯ ರೂಪಿಸಿದೆ!
ಷಟ್ಪದಿಯ ಛಂದಸ್ಸಿನಲಿ ಸರಳಶೈಲಿಯಲಿ
ರಚಿಸಿ ಕಾವ್ಯವ ರಸಿಕರನು ಮುಗ್ಧಗೊಳಿಪೆನ್ನ
ರೀತಿಯನೆ ಮುಂದಿನವರನಿಬರನುಕರಿಸಿಹರು"

ಕವಿ ಕುಮಾರವ್ಯಾಸನೆಂದ "ನೀ ರಾಘವಾಂ
ಕನು ಸುಧಾರಕನಹುದು! ಷಟ್ಪದಿಯ ಕಾವ್ಯಗಳು
ಜನತೆಯಲಿ ಮೆಚ್ಚನ್ನು ಪಡೆದಿಹವು—ಪಡೆಯುವುವು!
ಭಾಷೆಯಾ ಸರಳತೆಗೆ, ವಿಷಯದಾ ರಸಿಕತೆಗೆ
ಮನಸೋತು ನನ್ನ ದಶಪರ್ವಭಾರತವನ್ನು
ಕನ್ನಡಿಗರೆಲ್ಲರಾಮೋದದಿಂ ಪಠಿಸುವರ
ದೆಂಬ ವಿಷಯವನರಿತು ಸಂತೋಷವಾಂತಿಹೆನು."

ಕವಿ ಪುರಂದರದಾಸರಿಂತೆಂದು ಹೇಳಿದರು:
"ದಾಸಕೂಟದ ನಾವು ಕನ್ನಡದ ಮಾತಿನೊಳೆ

ನೂರಾರು ಭಕ್ತಿಗೀತಗಳನ್ನು ಬರೆದಿರಲು,
ಕೆಲ ಕನ್ನಡಿಗರಿಂದು ತಾಯ್ನುಡಿಯನೊಲ್ಲನಲೆ
'ಯೂಗೇ ಅಟಾವಿಸೇ ವಿಟಿವ್ಸರಿ ಉಭ' ಎಂದು
ಮುಂತಾಗಿ ಹಾಡುತ್ತಲನ್ಯಭಾಷಾಸಕ್ತಿ
ಯನ್ನು ಹೆಚ್ಚಾಗಿ ತೋರುವರೇಕೊ ನಾ ಕಾಣೆ!'

ಬಳಿಕ ಕವಿಮುದ್ದಣನು ತಾನಿಂತು ಹೇಳಿದನು:
"ಹಳಗನ್ನಡವದಿರಲಿ–ಹೊಸಗನ್ನಡವದಿರಲಿ—
ಪದ್ಯವಾಗಿರಲಿ ಮೇಣ್ ಮೃದುಗದ್ಯವಾಗಿರಲಿ
'ವಾಕ್ಯಂ ರಸಾತ್ಮಕಂ ಕಾವ್ಯಮೆ'ನ್ನುವ ವಚನ
ವದು ಸಿದ್ಧ—ಶಬ್ದಗಳನೆಳೆತಂದು ಜೋಡಿಸುತೆ
ಪ್ರಾಸಯುತವಾಗಿ ಬರೆಯಲು ಕಾವ್ಯವಲ್ಲವದು!
ಸೊಗಸಾದ ಮಾತಿನಲಿ ಕವಿ ತನ್ನ ಭಾವವನು
ಹೊರಸೂಸಿ ರಸಿಕರೆದೆಯನ್ನು ತಣಿಸಿದರದುವೆ
ಸತ್ಕಾವ್ಯವೆಂದೆನಿಸಿ ಬಹುಕಾಲ ಬಾಳುವುದು"

ಬಳಿಕ ಯಾರೂ ಮಾತನಾಡಲಿಕ್ಕೇಳದಿರ
ಲಾ ಸಭಾಪತಿಯಾದ ನಾನೆದ್ದು ನುಡಿದೆ "ನೆರೆ
ಕವಿಪುಂಗವರೆ! ನಿಮ್ಮ ಸಾಹಿತ್ಯಚರ್ಚೆಯಲಿ
ಹುರುಳುಂಟು—ತಿರುಳುಂಟು!—ಆಕ್ಷೇಪಗಳಲಿಯೂ
ಸಾರವಿದೆ—ಸಂಸ್ಕೃತಿಯ ಭಾರವಿದೆ! ಆದರೂ
ಎನ್ನಂತರಂಗವನು ಹೇಳದಿರಲಧ್ಯಕ್ಷ
ಪನದ ಗೌರವವನ್ನು ಲಘುಪಡಿಸಿಕೊಂಡಂತೆ!"

"ಪಂಪಕವಿ ನುಡಿದಂತೆ ಆಂಗ್ಲಭಾಷಾಮೋಹ
ದಿಂದ ಕನ್ನಡವ ಕೀಳ್ಗೈವ ಕೆಲ ಕನ್ನಡಿಗ
ರೀವರವರಭಿಮಾನಶೂನ್ಯತೆಯು ಹಿತವಲ್ಲ!"

"ರನ್ನಕವಿ ಹೇಳ್ದಂತೆ ಸಾಲೆಯಲಿ ಸಕ್ಕದವ
ಕಲಿಯಲೇಬೇಕೆಂಬ ನಿಯಮವಿಹುದುಚಿತವದು!''

"ಜನ್ನಕವಿಯೊರೆದಂತೆ ಜಿನಮತದ ಬಾಂಧವರು
ಪೂರ್ವಜರ ಸಂಸ್ಕೃತಿಯು ನೀಗಿ ಸಾಹಿತ್ಯಸೇ
ವೆಯುನೆಸಗದಲೆ ಬಾಳ್ವ ನಡತೆಯುದು ತಿವಲ್ಲ!–"

"ಕವಿ ಕೇಶಿರಾಜನಾಕ್ಷೇಪವದು ಸರಿಯಲ್ಲ!–
ಕಾಲಾನುಗುಣದಿಂದ ಕನ್ನಡದ ರೂಪ ಬದ
ಲಾಗಿ ಹಳಗನ್ನಡದ ನಿಯಮಗಳು ಹೊಂದದಿವೆ!
ಹೊಸಗನ್ನಡಕ್ಕೊಂದು ಹೊಸನಿಯಮವನು ರಚಿಸಿ
ನುಡಿಯು ರೂಪಿಸುವ ವೈಯಾಕರಣನುದಯಿಸಲಿ!"

"ಹಳೆ ಸಂಪ್ರದಾಯವಾದಿಗಳ ಟೀಕೆಯ ಸಹಿಸಿ
ಹೊಸನುಡಿಯೊಳೊಸೆದು ಷಟ್ಪದಕಾವ್ಯ ಹೊಸೆದದನು
ಪಸರಿಸಿದ ಜಸವು ಕವಿರಾಘವಾಂಕನಿಗಹುದು!"

"ಕವಿಕುಮಾರವ್ಯಾಸನತಿಸರಳಕವಿಯಹುದು!–
ಮಧುರಪದ, ಹಿತಭಾವ, ಮೆರೆವಲಂಕೃತಿಯಿಂದ
ಕನ್ನಡದ ನುಡಿವೆಣ್ಣನೊಲಿಯಿಸುವ ನಲಿಯಿಸುವ

ಕಲೆಯುವನೊಳಿದೆ! ಹಿಂದು ಸಾಹಿತ್ಯಲಾಭವದು
ಸಾಮಾನ್ಯ ಜನರಿಗೂ ಲಭಿಸಲೆನ್ನುತ ಬಗೆದು
ಕಾಲಾನುಗುಣವಾದ ಹೊಸಗನ್ನಡದೊಳವನು
ಭಾಮಿನಿಯ ಹೆಜ್ಜೆಯಲಿ, ಸವಿನುಡಿಯ ಗೆಜ್ಜೆಯಲಿ,
ಭಾರತವ ಕುಣಿಸಿ ನಗಿಸಿದ ಕಜ್ಜವದು ನುತ್ಯ!"

"ಆದರಾ ಭಾರತವು ಸಕಲಜನಸನ್ನುತವ
ದೆಂಬ ಹೆಗ್ಗಳಿಕೆಯದು ಸರಿಯಲ್ಲ'—ಮಡಿಕೇರಿ
ಸಾಹಿತ್ಯಸಮ್ಮೇಳನದ ಸಮಯದಲ್ಲಿ ಪಂ
ಡಿತರೊರ್ವರೀ ತೆರದಿ ತೆಗಳಿಕೆಯ ಮಾಡಿಹರು:
'ಹಲಗೆ ಬಳಹವ ಪಿಡಿಯದಗ್ಗಳಿಕೆ—ಪದವಿಟ್ಟು
ಅಳುಪದಗ್ಗಳಿಕೆಯಿಂ ಬರೆದ ಕಬ್ಬವ ತಾನು
ತಿದ್ದಿಕೊಳ್ಳದೆ ಕಾವ್ಯಲಕ್ಷಣವ ಮೀರಿ ದಶ
ಪರ್ವಭಾರತವೊರೆದ ಕವಿಕುಮಾರವ್ಯಾಸ
ನಾ ಕಾಲದಿಂದ ಕಬ್ಬದ ಕಬ್ಬು ಸಿಹಿಯಿಲ್ಲ!'
ಇರಲಿರಲಿ, ಲೋಕದಲಿ ಮತಭೇದವಿರವುದಿದು
ಸ್ವಾಭಾವಿಕವಿದಲ್ತೆ!"

"ಭಾಗವತರಾ ಪುರಂ
ದರದಾಸರುಸುರಿದಾಕ್ಷೇಪವದು ಸಹಜವೈ!
ಕರ್ಣಾಟಕೀರ್ತನೆಗಳನ್ನು ಕಡೆಗಣಿಸುತ್ತ
ಲನ್ಯಭಾಷೆಯ ಗೀತೆಗಳ ಮೋಹಿಸುವುದಹಿತ!"

"ಮುದ್ದಣಕವಿಯ ವಚನವತಿಶಯೋಕ್ತಿಯದಲ್ಲ!
ಮುದ್ದಾಗಿ ರಾಮಾಶ್ವಮೇಧ ಕಥೆಯನ್ನವನು
ಗದ್ಯಕಾವ್ಯದಿ ಬರೆದು ರಸಸಿದ್ಧಕವಿಯಹನು!"

"ಭಾವನೆಯ ಮುಗುಳುಗಳು ಮಾತಿನಲರುಗಳಾಗಿ
ಸುಮನಸರಿಗಾಮೋದವೆಸಗೆ ಸತ್ಕಾವ್ಯವದು!

ಹಳತು ಹೊಸತೆಂಬ ಭೇದವಮಾಳ್ಪುದನುಚಿತವು
ಪ್ರಗತಿಯು ನಿಸರ್ಗಲಕ್ಷಣವಲ್ತೆ! ಕಾಲಪ್ರ
ವಾಹದಲಿ ಬದಲಾವಣೆಗಳಾಗುವುದು ಸಹಜ
ವನಿವಾರ್ಯವದರಿಂದ ಹಳೆಯ ಸಂಸ್ಕೃತಿಯನ್ನು
ಕಾಪಾಡಿ ಹೊಸತನ್ನು ಕೂಡಿ ನಲಿಯುವುದೆ ತಾ
ಕಾಲಧರ್ಮವು!–ಅದುವೆ ಜಸಕೆ ಕಾರಣವಲ್ತೆ!

ಕನ್ನಡದ ಮಾತೆಯನು ನುತಿಸಿ, ಸೇವಿಸಿ, ಜಗದಿ
ಸೊಗದಿ ಬಾಳ್ವುದೆ ನಮ್ಮ ಗುರಿ–ಧರ್ಮ–ಸತ್ಕರ್ಮ!

ಎನಲಾಗ ಗುಡುಗೊಂದು ಘರ್ಜಿಸಲು, ವಿಸ್ಮಯದೊ
ಳೆಚ್ಚತ್ತು ಕಣ್ದೆರೆದು ನೋಡುತಿರಲಿದಿರಿನಲಿ
ದೀಪ ಮಿಣುಕುತಲಿತ್ತು! ನಾನಿದ್ದೆನಾಸನದಿ!!
ನಾ ಕಂಡ ಕಡುವಿಭವದಮರಲೋಕವದೆನ್ನ
ಕನಸಿನುದ್ಯಾನದೊಳಗಿನ ಕುಸುಮವೆಂದರಿತೆ

ಯದ್ವಾ ತದ್ವಾ

ಕರ್ಣಾಟಕದಲಿ ಬೀದರಿನಲ್ಲಿ
        ಮೊಗಲರಸನು ತಾನೊಬ್ಬನು ಅಲ್ಲಿ
ರಾಜ್ಯವನಾಳುತಲಿದ್ದನು ಹಿಂದೆ;
        ರೂಢಿಯೊಳವನನು 'ಸುಲ್ತಾನ್' ಎಂದೆ
ಜನಗಳು ಹೆಸರಿಸುತಿದ್ದರು ತಾವು
        ತಿಳಿಯದೆ ಅವನಂಕಿತನಾಮವನು.

ಧರ್ಮದ ಮರ್ಮವ ತಿಳಿಯುವ ಹುಚ್ಚು
        ಹಿಡಿಯಿತು ಅರಸಗೆ; ಓದಿದ ಹೆಚ್ಚು
ಶಾಸ್ತ್ರಗ್ರಂಥಗಳ—ಧರ್ಮದ ರೀತಿ
        ತಿಳಿಯಲು ವಾಚನವಾಯಿತು ನೀತಿ.
ಓದಿ ಓದಿ ಮರುಳಾದನು ತಾನು
        ಕೋಚಭಟ್ಟನಾ ತೆರದಲಿ ಅವನು.

ಮಾಯೆಯ ದಾಟುವ ಪರಿಯನರಿಯದೆ
ಸೋತರು ಹಲವರು ಭವಬಂಧನದೆ!
ಮಾಯೆಯ ದೆಸೆಯಿಂ ಇಂದ್ರಿಯದಮನ
ವಸಾಧ್ಯವಾಯಿತು!--ದಿವ್ಯಜ್ಞಾನ
ವಚಿಂತ್ಯವಾಯಿತು!—ಧರ್ಮದ ನಿಯಮ
ಯದ್ವಾತದ್ವಾ ಆಯಿತು ಅಮಮ!

ಯದ್ವಾತದ್ವಾ ಮಾಯೆಯ ಗೆಲಲು
ಯದ್ವಾತದ್ವಾ ನಡತೆಯೆ ಮೇಲು!
ಮುಳ್ಳನು ಕೀಳಲು ಮುಳ್ಳೇ ಗತಿಯು—
ಸುಳ್ಳನು ಶೋಧಿಸೆ ಸುಳ್ಳೇ ಧೃತಿಯು!
ನುಡಿಯಲಿ, ನಡೆಯಲಿ, ವ್ಯವಹಾರದಲಿ
ಯದ್ವಾತದ್ವತೆ ಖ್ಯಾತಿಗೆ ಬರಲಿ!

ಮಾಯೆಯ ದಾಟಲು ಅದುವೇ ಧ್ಯೇಯ!
ಮುಕ್ತಿಯ ಗಳಿಸಲು ಅದುವೆ ಉಪಾಯ!!
ಎನ್ನುತ ಯೋಚಿಸಿ ಅರಸನು ಮನದೆ
ಮಂತ್ರಿಯ ಕರೆಸುತ ನುಡಿದನು:—"ಜವದೆ
ಆಮಂತ್ರಿಸು ಪುನಜನರನು ಇಂದು
ರಾಜಾಸ್ಥಾನಕೆ ಬರಬೇಕೆಂದು"

ಡಂಗುರಹೊಯ್ಸುತ ಸಚಿವನು ಅಂದು
ರಾಜಾಸ್ಥಾನಕೆ ಪ್ರಜೆಗಳ ಹಿಂಡು

ಬಹ ಏರ್ಪಾಡನು ಗೈಯಲು, ಬಂದು
        "ಸುಲ್ತಾನ್ ಬಾದ್‌ಷಾಕಿ ಜೈ" ಎಂದು
ಪೌರಜನರು ಜಯಘೋಷವ ಮಾಡಿ
        'ಸಲಾಮು' ಮಾಡುತ ನಲಿದರು ಕೂಡಿ

ಸುಲ್ತಾನನು ಸಿಂಹಾಸನವೇರಿ,
        ಗಾಂಭೀರ್ಯದ ಮುಖಮುದ್ರೆಯ ಬೀರಿ,
ಘರ್ಜಿಸಿ ನುಡಿದನು—"ಧರ್ಮರಹಸ್ಯ
        ತಿಳಿಯದೆ ಬಳಲುವನಿಬರು ಸತ್ಯ.
ಯದ್ವಾತದ್ವಾ ತತ್ತ್ವವ ಪೊರೆದ
        ಮಾಯೆಯ ಗೆಲ್ವುದೆ ಎನ್ನ ಸುಬೋಧ."

"ಯದ್ವಾತದ್ವಾ ಮಾಯೆಯ ಗೆಲಲು
        ಯದ್ವಾತದ್ವಾ ನಡತೆಯೆ ಮೇಲು!
ಅದರಿಂದಂತಹ ನಡತೆಯ ರೀತಿ
        ವಿವರಿಸುವೆನು—ತಾಳುತೆ ನೀವ್ ಪ್ರೀತಿ
ಅದನಾಶ್ರಯಿಸಲು ಮಾಯೆಗೆ ಸಾವು
        ಬರುವುದು—ಸುಖಪಡೆಯುವಿರೈ ನೀವು"

"ಹಗಲಲಿ ನಿದ್ದೆಯ ಮಾಡಲು ಬೇಕು!
        ನಿಶಿಯಲಿ ಕರ್ಮವನೆಸಗಲು ಬೇಕು!
ಹಗಲೇ ಸ್ವಪ್ನಾವಸ್ಥೆಗೆ ಮೂಲ!
        ರಾತ್ರಿಯೆ ಕಾರ್ಯಕ್ಷೇತ್ರಕೆ ಕಾಲ!"

"ಗಂಡಸು ಸೀರೆಯನುಡಲಿಕೆ ಬೇಕು!
ಚಿನ್ನಾಭರಣವ ತೊಡಲಿಕೆಬೇಕು!
ಲಜ್ಜಾಭಾರದಿ ಬಗ್ಗಿಸಿ ಮುಖವ
ಮೃದುಗತಿಯಲಿ ನಡೆಯುವುದತಿವಿಭವ!''

"ಅಡುಗೆಯ ಕೆಲಸವ ಚೊಕ್ಕಟತನದೆ
ಮಾಡಲುಬೇಕೈ ಪುರುಷನು ದೃಢದೆ!
ಮಕ್ಕಳ ಹೆರುತಲಿ ಪೋಷಿಸಬೇಕು—
ಭಾಗ್ಯಲಕ್ಷ್ಮ್ರನೆಂದೆನಿಸಲುಬೇಕು!"

"ಹೆಂಗಸು ಧೋತ್ರವುಡಲಿಕೆಬೇಕು—
ನಿಲುವಂಗಿಯು ತಾ ತೊಡಲಿಕೆಬೇಕು!
ಧಿಟ್ಟತನದ ದೃಷ್ಟಿಯ ಪಸರಿಸುತ
ನಡೆಯಲುಬೇಕೈ ಭರದಲಿ ತ್ವರಿತ!"

"ಜೀವನನುದ್ಯೋಗವ ತಾ ವಹಿಸಿ,
ಮಹಿಳೆಯು ಹೆಚ್ಚಿನ ಹಣವನು ಗಳಿಸಿ,
ನಿಜಸಂಸಾರವ ಪೋಷಿಸಬೇಕು!
ಭುಜಬಲಕೀರ್ತಿಯ ಹರಡಲುಬೇಕು!"

"ಮಕ್ಕಳು ದೇವರ ಭಜಿಸಲುಬೇಕು—
ಪರಲೋಕವ ಹಾರೈಸಲುಬೇಕು!

ಮುದುಕರು ಶಾಲೆಗೆ ಹೋಗಲುಬೇಕು —
ಆಟಪಾಟಗಳ ಮೆಚ್ಚಲುಬೇಕು!"

"ಗೃಹಿಣಿಯು ಗಣಿಕೆಯ ಧರ್ಮವ ವಹಿಸಿ
ಬಾಳ್ವುದು ವಿಹಿತವು ತಾ ಸೊಗವೆರಸಿ!
ವೇಶ್ಯೆಯು ಏಕಪತಿವ್ರತ ಸಹಿಸಿ
ಸರಳ ಜೀವನದಿ ಬಾಳ್ವುದು ವಾಸಿ!"

"ಹರದಗೆ ಹಿರಿದು ವಕಾಲತು ಮೆಚ್ಚು!
ವ್ಯಾಪಾರವದು ವಕೀಲಗೆ ಹೆಚ್ಚು!
ಬೇಸಾಯದವಗೆ ನೌಕರಿ ಮೆಚ್ಚು!
ಕೂಲಿಯವಗೆ ಬೇಸಾಯದ ಹುಚ್ಚು!"

"ಗಾಯಕನೇ ತಾ ನರ್ತನವಾಡೆ,
ನರ್ತಕನೇ ಗೀತಗಳನು ಹಾಡೆ,
ಚಿತ್ರಕಾರನೇ ಕಾವ್ಯವ ಬರೆಯೆ,
ಕವಿ ಚಿತ್ರಗಳನು ಬರೆವುದು ಸರಿಯೆ!"

"ಸಿರಿವಂತನು ಅಂಬಲಿಯುಣಬೇಕು!
ಬಡವನು ಮೃಷ್ಟಾನ್ನವನುಣಬೇಕು!
ಧನಿಕನು ಬಿಕ್ಕೆಯ ಬೇಡಲುಬೇಕು!
ಬಡವನು ದಾನವ ನೀಡಲುಬೇಕು!"

ಸುಲ್ತಾನನು ತಾನೀ ತೆರದಲ್ಲಿ
ಯದ್ಭಾವಿತದ್ಭಾ ತತ್ತ್ವವನಲ್ಲಿ
ಬಿತ್ತರಿಸುತ್ತಿರೆ ಸೇವಕನೊರ್ವ
ನೇಳುತ ವಿನಯದೊಳೆಂದನು. "ದೇವ!

"ತಿಳಿದೆನು ಭಾಷಣದಾ ಮರ್ಮವನು!
ತಿಳಿದೆನು ತದ್ರೀತಿಯ ಕರ್ಮವನು!
ಅಂತಿರೆ ನಾ ದೊರೆ – ನೀ ಸೇವಕನು!
ಏರುವೆ ಸಿಂಹಾಸನವನು ನಾನು!
ಎನ್ನಯ ಊಳಿಗದಲಿ ನೀನಿದ್ದು
ಬಾಳಲುಬೇಕೈ ಸೇವೆಯ ಗೈದು!"

ಎನೆ ಸುಲ್ತಾನನು ಕೋಪವ ತಾಳಿ,
"ಭ್ರಷ್ಟನೆ! ನಿನ್ನಯ ನಾಲಗೆ ಸೀಳಿ
ತಲೆಯನ್ನೀಗಲೆ ಕಡಿಯುವೆನೆ"ಂದು
ಹಿಡಿನಿಡಿಗೊಳ್ಳಲು, ಸೇವಕನಂದು
ಶಾಂತಿಯ ತಾಳ್ವುದು, ಸುಲ್ತಾನ್ ವಿಭುವೆ!
ನಿನ್ನಯ ತತ್ತ್ವವೆನಗೆ ಬಾಹಿರವೆ?"

"ನಿನ್ನಯ ಯದ್ಭಾವಿತದ್ಭಾ ತತ್ತ್ವ
ದಿಂದಲೆ ಹೊಂದಿದೆ ನಾನು ಮಹತ್ವ!

ಕಾರ್ಯಕೆ ಬಾರದ ಸೂತ್ರವು ವ್ಯರ್ಥ!–
ತಿಳಿಸಲಿದನು ನಾ ನುಡಿದೆನನರ್ಥ!
ರಾಜನು ನೀನೇ— ನಾನೇ ಚರನು!
ನಿನ್ನನು ಸೇವಿಪೆನನುದಿನ ನಾನು."

ಅರಸನು ತನ್ನಯ ತಪ್ಪನು ತಿಳಿದು
ನಾಚಿಕೆಗೊಂಡನು; ದೂತನ ಕರೆದು,
"ಭಾಪುರೆ! ಸೇವಕನಾದರು ನಿನ್ನ
ಜಾಣ್ಮೆಗೆ ಮೆಚ್ಚಿದೆನೀ ಬಹುಮಾನ
ನಿನಗಿರಲೆ''ನ್ನುತ ರತ್ನದ ಸರವ
ನಾತನಿಗಿತ್ತನು ತಾಳ್ದು ಹರುಷವ.

❖ ❖ ❖ ❖ ❖

ಯದ್ವಾತದ್ವಾ ತತ್ತ್ವವು ಹೋಯ್ತು!
ಆ ಸಭೆಯಾಗ ವಿಸರ್ಜನೆಯಾಯ್ತು!

ಕ ನ್ನ ಡ ಮಾ ತೆ

ರಾಗ: ಭೈರವಿ—ಏಕತಾಳ
ಧಾಟಿ: (ದೇವಿ ಭುವನಮನಮೋಹಿನಿ)

ಮಾತೆ, ವಿಮಲಗುಣಶೋಭಿತೆ
ಕನ್ನಡ ಭುವನೇಶ್ವರಿ, ಸುಖದಾತೆ
ನಮಿಪೆವು ನುತಚರಿತೆ || ಪಲ್ಲ ||

ಗಿರಿದರಿಗಳ ಹೊಲಗಳ ಬೆಡಗಿಂದೆ
ತರುಲತೆಗಳ ಸುಮಗಳ ಸೊಬಗಿಂದೆ
ಹರಿವ ನದೀನದಗಳ ಬಿಣ್ಪಿಂದೆ
ತಿರೆಯ ತಿಲಕದೋಲ್ ಶೋಭಿಸೆ || ೧ ||

ಗುಡಿಗೋಪುರ, ದೇಗುಲಗಳ ಪೆಂಪು
ನಿಡುಕರಗಳ ವಿಗ್ರಹಗಳಲಂಪು
ಅರಮನೆ, ನೆಲಮನೆಗಳ ಕಡುಸೊಂಪು
ಪೊಣ್ಮಿರೆ ಬಿಡಯದೆ ರಾಜಿಸೆ || ೨ ||

ಕವಿಗಳು, ಗಮಕಿಗಳುರೆ ಚಿತ್ರಕರು,
ರೂವಾರಿಗಳಧಟನ ಬಲಯುತರು,
ನೃಪಶ್ರೇಷ್ಠರು, ಸಚಿವರು, ಧೀಯುತರು
ಎಸೆಯಲೆಸಕದೆ ವಿರಾಜಿಸೆ || ೩ ||

ಜನನೀ ನಿನ್ನನು ಜಾನಿಸಿ, ನುತಿಸಿ
ಸೇವಿಪ ಭಾಗ್ಯವ ಕರುಣಿಸು ಹರಸಿ
ಕನ್ನಡಮಂತ್ರವ ಚಿತ್ತದಿ ನಿಲಿಸಿ
ಬಾಳಿಸು ಬೆಳಗಿಸು ಸಂತತ || ೪ ||

೧೯೪೧

ನಾಡಗೀತೆ

ರಾಗ: ಭೂಪ—ಝಂಪೆ ತಾಳ
ಧಾಟಿ: (ಉದಯವಾಗಲಿ ನಮ್ಮ)

ಬೆಳಗಿ ಬಾಳಲಿ ನಮ್ಮ ಹಿರಿಯ ಕನ್ನಡನಾಡು ।
ಥಳಥಳಿಪ ಮೈಸಿರಿಯ ಸಿರಿಯ ಚೆಂದದ ಬೀಡು ॥ ಪಲ್ಲ ॥

ಭಾರತಾಂಬೆಯ ಮಡಿಯ ಮಡಿಲ ನಲವಿನ ಕೂಡು ।
ಚಾರಿತ್ರಿಕಾಶ್ಚರ್ಯ ಕಾರ್ಯಗಳ ಕರುಮಾಡು ॥
ಕಾರವಾರದ ಮಂಗಳೂರ ನಡುವಿನ ನೀಡು ।
ನೀರಗಳ ಪಡುಗಡಲ ಹುಲುಸು ತೆಂಗಿನಕಾಡು ॥ ೧ ॥

ಧಾರವಾಡವು, ಕೊಡಗು, ಬಳ್ಳಾರಿ, ಹೊಸನಾಡು ।
ಹೀರ ಮೈಸೂರು, ಕರೆನಾಡು, ಸಿರಿಮಲೆನಾಡು ॥
ನೇರಾಗಿ ತೆಂಕುನಾಡೊಂದುಗೂಡಿದ ಸೂಡು ।
ಏರಿ ಕಾವೇರಿ ತುಂಗೆಯರ ತನೆ ನೀರೂಡು ॥ ೨ ॥

ಹಾರಿ ಹರಿಯುವ ಜೋಗುಶಕ್ತಿಗಿದು ತಾಯ್ನಾಡು ।
ಸಾರ ಸುಜ್ಞಾಸವಿಜ್ಞಾನಗಳಿಗಿದು ಮೂಡು ॥
ಧೀರವೀರೋದಾರ ವಿಬುಧರಿಗೆ ನೆಲೆವೀಡು ।
ಸಾರಿ ವಿಜಯವ ನಿರತ ಮೆರೆದಾಡುವೀ ನಾಡು ॥ ೩ ॥

೧೯೫೬